ಅಧ್ಯಕ್ಷರು: ಮಾನ್ಯ ಮಂತ್ರಿಗಳ ಹತ್ತಿರ ಬಹುಶಃ ಎಲ್ಲಾ ಉತ್ತರ ಇರಬಹುದು. ಮಂತ್ರಿಗಳು ಇಲ್ಲದೇ ಇರುವಾಗ ನೀವು ಮಾತನಾಡಿ, ಏನು ಪ್ರಯೋಜನವಾಗುತ್ತದೆ.

ಶ್ರೀ ಬಿ.ಬಿ. ಶಿವಪ್ಪ: ಮಾನ್ಯ ಅಧ್ಯಕ್ಷರೆ, ಇದನ್ನು ಮತ್ತೆ ತೆಗೆದುಕೊಳ್ಳುತ್ತೀರಾ?

ಅಧ್ಯಕ್ಷರು: ಅವಶ್ಯಕವಾಗಿ ತೆಗೆದುಕೊಳ್ಳುತ್ತೇವೆ.

3. ವರದಿಯನ್ನೊಪ್ಪಿಸುವುದು:

ಶ್ರೀ ಡಿ.ಬಿ. ಚಂದ್ರೇಗೌಡ (ಮಾನ್ಯ ಕಾನೂನು ಸಚಿವರು ಡಾ: ಎ.ಬಿ. ಮಲಕರೆಡ್ಡಿ, ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳ ಪರವಾಗಿ): ಮಾನ್ಯ ಅಧ್ಯಕ್ಷರೆ, ನ್ಯಾಯಮೂರ್ತಿ ಡಾ: ಪರಮೇಶ್ವರ ದಯಾಳ್ ವಿಚಾರಣಾ ಆಯೋಗದ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: ವರದಿಯನ್ನೊಪ್ಪಿಸಲಾಯಿತು.

4. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ಹಾಸನ ಡೈರಿಯ ಅವ್ಯವಹಾರ

+ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ್): ಮಾನ್ಯ ಅಧ್ಯಕ್ಷರೆ, ನಾನು ಒಂದು ಪತ್ರವನ್ನು ತಮಗೆ ಕಳುಹಿಸಿ ಕೊಟ್ಟಿದ್ದೆ. ಹಾಸನ್ ಡೈರಿಯ ಬಗ್ಗೆ, ನಿನ್ನೆಯ ದಿವಸ ನಾನು ಏನು ಹೇಳಿದ್ದೇನೆಂದರೆ, ಹೊರಗಡೆ ಧರಣಿ ಕುಳಿತಿರುತ್ತಾರೆ, ಕೆಲವರು ಒಳಗಡೆ ಇದ್ದಾರೆ. ಸುಮಾರು 500, 600 ಜನ ಪೊಲೀಸ್‌ನವರು ಆ ಡೈರಿಗೆ ಮುತ್ತಿಗೆ ಹಾಕಿದ್ದಾರೆ. ಯಾರಾದರೊಬ್ಬ ಅಧಿಕಾರಿಯನ್ನು ಅಲ್ಲಿಗೆ ಕಳುಹಿಸಿ ವಿಚಾರ ಮಾಡಿ ಅಲ್ಲಿ ಅಹಿತಕರ ಘಟನೆ ನಡೆಯದಂತೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಂಡಿದ್ದೆ. ಈ ದಿವಸ ಬೆಳಗಿನ ಜಾವ ಅಧ್ಯಕ್ಷರ ಕಡೆ ಇದ್ದಂಥ 15-20 ಜನರು ಅಲ್ಲಿಯ ಗಾಜನ್ನು ಒಡೆದಿದ್ದಾರಂತೆ, ಹೊರಗಡೆ ಪೀಸ್‌ಫುಲ್ ಆಗಿ ಧರಣಿ ಕುಳಿತಿದ್ದವರನ್ನು ಪೊಲೀಸರು ಹಿಡಿದುಕೊಂಡು ಹೋಗಿ ಹೊಡೆದಿದ್ದಾರೆ. ನಿರಾಪರಾಧಿಗಳಾದ ಅವರು ಕಳೆದ ಎರಡು ವರ್ಷಗಳಿಂದ ನ್ಯಾಯವನ್ನು ಒದಗಿಸಿಕೊಡಬೇಕೆಂದು ಪ್ರಯತ್ನವನ್ನು ಮಾಡುತ್ತಿದ್ದಾರೆ, ಹೇಳಿಕೆಯನ್ನು ಕೊಟ್ಟಿರುತ್ತಾರೆ. ಕಳೆದ ಮೂರು ನಾಲ್ಕುದಿನಗಳಿಂದ ಏಸ್‌ಪಿ, ಡಿಸಿ ಹಾಗೂ ಅಸಿಸ್ಟಂಟ್ ಲೇಬರ್ ಅಧಿಕಾರಿ ಅವರನ್ನು ಕರೆಸಿ ನೆಗೋಶಿಯೇಶನ್‌ಗೆ ಪ್ರಯತ್ನವನ್ನು ಮಾಡಿದ್ದಾರೆ. ಅಲ್ಲಿ ಆಡಳಿತರೂಢರಿಗೆ ಗೊತ್ತಿಲ್ಲ, ಇವರು ಪೀಸ್‌ಫುಲ್ ಆಗಿ ಧರಣಾ ಹೂಡಿದ್ದಾರೆ, ಅವರನ್ನು ಹಿಡಿದುಕೊಂಡು ಹೋಗಿ ತೊಂದರೆ ಕೊಟ್ಟಿದ್ದಾರೆ. ದಯವಿಟ್ಟು ಒಬ್ಬ ಅಧಿಕಾರಿಯನ್ನು ಅಲ್ಲಿಗೆ ಕಳುಹಿಸಿಕೊಡಬೇಕು.

ಅಧ್ಯಕ್ಷರು: ತಾವು ಹೇಳುವುದು ಸರಿಯಾಗಿದೆ. ನಿನ್ನೆ ಹೇಳಿದ್ದೀರಿ ಮತ್ತು ಇವತ್ತು ಕೂಡ ಅದರ ಬಗ್ಗೆ ಹೇಳುತ್ತಿದ್ದೀರಿ. ಶ್ರೀಮಾನ್ ಕೃಷ್ಣಪ್ಪನವರು ನಿನ್ನೆ ಒಪ್ಪಿಕೊಂಡಿದ್ದಾರೆ, ಅಧಿಕಾರಿಯನ್ನು ಕೊಟ್ಟು ಕಳುಹಿಸುತ್ತೇನೆಂದು ಹೇಳಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ನಾಳೆ ಆ ವಿಷಯ ಬರುತ್ತದೆ, ಆಗ ಅವರು ಅದರ ಬಗ್ಗೆ ಡೀಟೈಲ್ಸ್ ಡಿಸ್‌ಕಸ್ ಮಾಡುತ್ತಾರೆ.

ಅಧ್ಯಕ್ಷರು: ನಾನು ಕೃಷ್ಣಪ್ಪನವರಿಗೆ ಹೇಳಿ, ಅವರು ಅಲ್ಲಿಗೆ ಅಧಿಕಾರಿಯನ್ನು ಕಳುಹಿಸಿದ್ದಾರೋ ಅಥವಾ ಇಲ್ಲವೋ ಎನ್ನುವುದನ್ನು ಸಂಜೆಯೊಳಗಾಗಿ ತರಿಸುತ್ತೇನೆ.

We will verify whether anybody is sent to hassan town, ಸಂಬಂಧಪಟ್ಟ ಮಂತ್ರಿಗಳನ್ನು ನಾವು ಕಾಂಟ್ಯಾಕ್ಟ್ ಮಾಡಬೇಕು.

ಶ್ರೀ ಜಗದೀಶ್ ಶೆಟ್ಟರ್: ನಿನ್ನೆ ಸಾಯಂಕಾಲದವರೆಗೆ ಯಾರು ಅಲ್ಲಿಗೆ ಹೋಗಿರುವುದಿಲ್ಲ.

ಅಧ್ಯಕ್ಷರು: ನಾನು ಸಂಬಂಧಪಟ್ಟ ಮಂತ್ರಿಗಳಿಗೆ ಹೇಳಿ ಕಳುಹಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಅಲ್ಲಿ ಯಾರಾದರೊಬ್ಬರು ಅಧಿಕಾರಿಗಳು ಹೋಗಿ, ಅಲ್ಲಿಯ ವಸ್ತುಸ್ಥಿತಿಯ ಬಗ್ಗೆ ನಮಗೆ ಹೇಳಿಕೆ ಕೊಟ್ಟರೆ ಅನುಕೂಲವಾಗುತ್ತದೆ, ಸರ್ಕಾರದ ಪರವಾಗಿ ಏನು ಕ್ರಮ ತೆಗೆದುಕೊಂಡಿಲ್ಲವೆಂದು ಆಗಬಾರದು, ದಯಮಾಡಿ ಕಳುಹಿಸಿಕೊಡಬೇಕು.

MR. SPEAKER:- We will verify, if possible after the lunch ಅವರು ಏನು ಹೇಳುತ್ತಾರೆ ನೋಡಿ ಉತ್ತರವನ್ನು ಹೇಳುತ್ತೇನೆ.

ಶ್ರೀ ಸಿ. ಚೆನ್ನಿಗಪ್ಪ: ಹಾಸನ್ ಡೈರಿಯಲ್ಲಿ ಕೆಲವು ಜನ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುವವರು ಅಲ್ಲಿದ್ದಾರೆ. ಕೆಲವರು ಬೇಕು ಎಂದು ಈ ರೀತಿಯಾಗಿ ಮಾಡಿಸುತ್ತಾರೆ. ಅಲ್ಲಿ ಅಂತಹ ಅನ್ಯಾಯ ನಡೆದಿಲ್ಲವೆನ್ನುವ ಮಾತನ್ನು ಹೇಳುತ್ತಾರೆ.

ಶ್ರೀ ಕೆ.ಹೆಚ್. ಹನುಮೇಗೌಡ: ಸಂಬಂಧಪಟ್ಟ ಮಂತ್ರಿಗಳು ಹೋಗಿ ನೋಡಿದ್ದಾರೆ. ನಾವು ಕೊಟ್ಟಂತಹ ರೆಪ್ರೆಜಂಟೇಶನ್ ಮೇಲೆ ಸಹಕಾರ ಸಚಿವರು ಮತ್ತು ಸಂಬಂಧಪಟ್ಟ ಮಂತ್ರಿಗಳು ವೆರಿಫೈ ಮಾಡಿ, ಈ ಅಲಿಗೇಶನ್‌ದಲ್ಲಿ ನಿಜ ಇದೆ ಎಂದು ಅವರೇ ಹೇಳಿದ್ದಾರೆ.

ಅಧ್ಯಕ್ಷರು: ಇವತ್ತಿನ ಪ್ರಶ್ನೆ ನಮ್ಮ ಮುಂದೆ ಇರುವುದು, ಅಧಿಕಾರಿಗಳನ್ನು ಕಳುಹಿಸಿದ್ದಾರೋ ಇಲ್ಲವೋ, ತಾವು ಡೀಟೈಲ್ಸ್‌ಗೆ ಹೋಗಬೇಡಿ. ಡೀಟೈಲ್ಸ್ ನಾಳೆ ತಾವು ಹೇಳಬೇಕು.

ಶ್ರೀ ಕೆ.ಪ್ರಭಾಕರ್ ಬಂಗೇರ್: ಮಾನ್ಯ ಅಧ್ಯಕ್ಷರೆ, ನಾನು ಒಂದು ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದೆ. ಕುದುರೆಮುಖ ರಾಷ್ಟ್ರೀಯ ಉದ್ಯಾನದ ಬಗ್ಗೆ ಹಾಗೂ ಹೆಚ್‌ಪಿಸಿಎಲ್ ಪೈಪ್‌ಲೈನ್ ಬಗ್ಗೆ ಶೀಘ್ರವಾಗಿ ತೆಗೆದುಕೊಳ್ಳಬೇಕು.

ಅಧ್ಯಕ್ಷರು: ಇದು ಬಂದ ತಕ್ಷಣ ಹಾಕುತ್ತೇವೆ, ನಾವು ಪ್ರತಿ ದಿವಸ ಎರಡೆರಡು ಹಾಕುತ್ತಿದ್ದೇವೆ. ನಮ್ಮ ಕಛೇರಿಯಲ್ಲಿ ಇನ್ನು ಕೆಲವು ಪೆಂಡಿಂಗ್ ಇರುತ್ತವೆ. ಕೆಲವು ಉತ್ತರ ಬಂದಿದೆ ಕೆಲವು ಉತ್ತರಗಳು ಬಂದಿರುವುದಿಲ್ಲ. We are having another 12 working days. ಇನ್ನು 24 ಕಾಲಿಂಗ್ ಅಟೆನ್‌ಷನ್ ಬರುತ್ತವೆ, ಬಂದಂತೆ ಹಾಕಿಕೊಂಡು ಹೋಗುತ್ತೇವೆ.

11.50 ಎ.ಎಂ.

5. ಗಮನ ಸೆಳೆಯುವ ಸೂಚನೆ

ಅ) ಕರ್ನಾಟಕ ರಾಜ್ಯ ವಿದ್ಯುತ್ ಮಗ್ಗ ಅಭಿವೃದ್ಧಿ ನಿಗಮವು ಸಮವಸ್ತ್ರ ಪೂರೈಸುತ್ತಿರುವುದರಿಂದ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ನೇಕಾರರಿಗೆ ಉಂಟಾಗಿರುವ ಸಮಸ್ಯೆಯ ಬಗ್ಗೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋದಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯ ವಿದ್ಯುತ್ ಮಗ್ಗ ಅಭಿವೃದ್ಧಿ ನಿಗಮವು ಸಮವಸ್ತ್ರ ಪೂರೈಸುತ್ತಿರುವುದರಿಂದ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ನೇಕಾರರಿಗೆ ಉಂಟಾಗಿರುವ ಸಮಸ್ಯೆಯ ಬಗ್ಗೆ ರೇಷ್ಮೆ ಹಾಗೂ ಜವಳಿ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಎಂ. ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು): ಮಾನ್ಯ ಅಧ್ಯಕ್ಷರೆ,

ಕರ್ನಾಟಕ ರಾಜ್ಯ ವಿದ್ಯುತ್ ಮಗ್ಗ ಅಭಿವೃದ್ಧಿ ನಿಗಮವೂ ಸಹ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಂತೆಯೇ ಕರ್ನಾಟಕ ಸರ್ಕಾರದ ಒಂದು ಉದ್ದಿಮೆಯಾಗಿರುತ್ತದೆ. ಸದರಿ ಕರ್ನಾಟಕ ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ಪ್ರೋತ್ಸಾಹ ನೀಡಿದಂತೆ, ಕರ್ನಾಟಕ ರಾಜ್ಯ ವಿದ್ಯುತ್ ಮಗ್ಗಗಳ ಅಭಿವೃದ್ಧಿ ನಿಗಮಕ್ಕೂ ಪ್ರೋತ್ಸಾಹ ನೀಡುವ ದೃಷ್ಟಿಯಿಂದ ಸರ್ಕಾರದ ಇಲಾಖೆಯ ಅವಶ್ಯಕ ಬಟ್ಟೆಗಳನ್ನು ಈ ಎರಡೂ ಸಂಸ್ಥೆಗಳಿಂದಲೂ ಖರೀದಿಸುವಂತೆ, ಸರ್ಕಾರದ ಇಲಾಖೆ, ಸಂಸ್ಥೆಗಳಿಗೆ ಸುತ್ತೋಲೆ ಮುಖಾಂತರ ನಿರ್ದೇಶನ ನೀಡಲಾಗಿದೆ.

ಕೈಮಗ್ಗಗಳಿಗೆ ಹೋಲಿಸಿದರೆ ವಿದ್ಯುತ್ ಮಗ್ಗಗಳ ಸ್ಥಿತಿಯೂ ಅಷ್ಟೇನೂ ಚೆನ್ನಾಗಿರುವುದಿಲ್ಲ. ಕೈಮಗ್ಗ ನೇಕಾರರಿಗೆ ಇರುವಂತೆ ವಿದ್ಯುತ್ ಮಗ್ಗ ನೇಕಾರರಿಗೂ ಸಹ ಮಾರುಕಟ್ಟೆ ಸಮಸ್ಯೆ ಇರುತ್ತದೆ. ಅಲ್ಲದೇ ಕೈಗಮಗ್ಗ ನೇಕಾರರಿಗೆ ಇರುವಂತೆ ವಿದ್ಯುತ್‌ಮಗ್ಗ ನೇಕಾರರಿಗೆ ಯಾವುದೇ ವಿಶೇಷ ಸೌಲಭ್ಯ ಇರುವುದಿಲ್ಲ. ಅಂದರೆ, ಮಾರುಕಟ್ಟೆ ಅಭಿವೃದ್ಧಿ ಸಹಾಯಧನ ವಸತಿ: ಕಾರ್ಯಾಗಾರ ಯೋಜನೆ, ಬಡ್ಡಿ ಸಹಾಯಧನ ಯೋಜನೆ, ತ್ರಿಫ್ಟ್‌ಫಂಡ್ ಯೋಜನೆ, ಇತ್ಯಾದಿ; ಕೇವಲ ಗುಂಪು ವಿಮಾ ಯೋಜನೆ ಸೌಲಭ್ಯ ಮಾತ್ರ ವಿದ್ಯುತ್ ಮಗ್ಗಗಳ ನೇಕಾರರಿಗೆ ಅನ್ವಯಿಸಲಾಗಿದೆ.

ಕರ್ನಾಟಕ ವಿದ್ಯುತ್‌ಮಗ್ಗಗಳ ಅಭಿವೃದ್ಧಿ ನಿಗಮಕ್ಕೆ 1997-98ನೇ ಸಾಲಿನಿಂದ ಸಮವಸ್ತ್ರ ಪೂರೈಕೆ ಮಾಡಲು ಕೋರಲಾಗುತ್ತಿದೆ. ಕ.ರಾ.ವಿದ್ಯುತ್‌ಮಗ್ಗ ಹಾಗೂ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮಗಳ ಕಳೆದ 3 ವರ್ಷಗಳ ವಹಿವಾಟು ಈ ಕೆಳಕಂಡಂತಿದೆ: